ಅವರು ಸಹಜವೆಂಬಂತೆ 'ಹೌದು. ಇವತ್ತು ರಜಾ' ಎಂದರು.

'ಯಾಕೆ?'

'ನಮ್ಮ ಯಜಮಾನರ ಮನೆಯಲ್ಲಿ ಒಂದು ಸಾವಾಗಿದೆ. ಅದಕ್ಕೇ' ಎಂದರವರು.

ಅವನು ಹೊರಗೆ ಬಂದ. ರಸ್ತೆ ಬದಿಯಲ್ಲಿ ಕಸದ ತೊಟ್ಟಿ ಅನಾಥವಾಗಿ ತುಂಬು ಗರ್ಭಿಣಿಯಂತೆ ಏದುಸಿರು ಬಿಡುತ್ತಿತ್ತು. ರಸ್ತೆಯುದ್ದಕ್ಕೂ ದೃಷ್ಟಿ ಹಾಯಿಸಿದ. ಅಕ್ಕಪಕ್ಕದ ಎಲ್ಲ ಅಂಗಡಿಗಳೂ ಮುಚ್ಚಿದ್ದವು. ಸರ್ಕಲ್ಲಿನ ಮೂಲೆಯಲ್ಲಿ ಕೂತಿರುತ್ತಿದ್ದ ತರಕಾರಿ ಮಾರುವ ಮುದುಕಿಯೂ ಕಾಣಲಿಲ್ಲ. ಸದಾ ತುಂಬಿ ತುಳುಕುತ್ತಿದ್ದ ಚಟುವಟಿಕೆಯಿಂದ ಗಲಗಲವೆನ್ನುತ್ತಿದ್ದ ಬಜಾರು ನಿಶ್ಶಬ್ದವಾಗಿತ್ತು. ಅವನು ಮತ್ತೆ ಹೋಟೆಲ್ ಒಳಗೆ ಹೋಗಿ ಹೋಟೆಲಿನ ಹುಡುಗರನ್ನು ಕೇಳಿದ

'ಯಾಕೆ ಎಲ್ಲರೂ ಮುಚ್ಚಿದ್ದಾರೆ? ಒಬ್ಬರೂ ಕಾಣುತ್ತಿಲ್ಲ?'

'ನಿಮಗೆ ಗೊತ್ತಿಲ್ಲವೇ? ನಗರದಲ್ಲಿ ಪ್ಲೇಗು ಹರಡಿದೆಯಂತೆ. ಎಲ್ಲರೂ ಊರು ಬಿಟ್ಟು ಓಡಿದ್ದಾರೆ. ನಾವೂ ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ನಮ್ಮೂರಿಗೆ ಹೋಗುತ್ತೇವೆ!'

ಅವನು ಗಾಬರಿಯಿಂದ ಹೊರಗೆ ಓಡಿ ಬಂದ. ತಾನೂ ತಕ್ಷಣ ಊರು ಬಿಡಬೇಕಾಗಿದೆ. ಮನೆಗೆ ಹೋಗಿ, ಅಲ್ಲಿಂದ ಸಿಕ್ಕಿದ ಬಸ್ಸೋ ಲಾರಿಯೋ ಹಿಡಿದು ಹೆಂಡತಿಯ ತವರುಮನೆಗೆ ಹೋಗುವುದು ಒಳ್ಳೆಯದು ಎಂದು ನಿರ್ಧರಿಸಿ ಮನೆಯತ್ತ ಓಡತೊಡಗಿದ.

ಹಿಂದಿನಿಂದ ಕಾರ್ಪೋರೇಶನ್ ವ್ಯಾನೊಂದು ಧ್ವನಿವರ್ಧಕದಲ್ಲಿ ಅರಚುತ್ತಾ ಮುಂದೆ ಹೋಯಿತು. 'ನಗರದಲ್ಲಿ ಪ್ಲೇಗ್ ಹರಡಿದೆ. ಎಲ್ಲರೂ ತಕ್ಷಣ ಊರು ಬಿಟ್ಟು ಹೋಗಿ. ಏನಾದರೂ ಆದರೆ ಸಹಾಯ ಮಾಡಲು ನಮ್ಮಿಂದ ಸಾಧ್ಯವಿಲ್ಲ. ನಾವು ಕೂಡಾ ಊರು ಬಿಡುವವರೇ. ಕಾರ್ಪೋರೇಶನ್ನಿಗೆ, ಶವ ವಾಹಕ ವಾಹನಕ್ಕೆ ಫೋನ್ ಮಾಡಿದರೂ ಯಾರೂ ಸಿಕ್ಕುವುದಿಲ್ಲ. ನಿಮ್ಮ ಜೀವಕ್ಕೆ, ನಿಮ್ಮ ಸಾವಿಗೆ ನೀವೇ ಹೊಣೆ. ತಕ್ಷಣ ಊರು ಖಾಲಿ ಮಾಡಿ' ಎಂದು ಅದು ಮತ್ತೆ ಮತ್ತೆ ಕೂಗುತ್ತಿತ್ತು.

## ಗೋಪಾಲಕೃಷ್ಣ ಪೈ

ಕತೆಗಾರ, ಕಾದಂಬರಿಕಾರ ಹಾಗೂ ಅನುವಾದಕ ಗೋಪಾಲಕೃಷ್ಣ ಪೈ ಕಾಸರಗೋಡಿನ ಪೆರ್ಲದವರು.

ಪೈ ಅವರ ಮೊದಲ ಕಥಾ ಸಂಗ್ರಹ 'ತಿರುವು'. ಬಳಿಕ 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಸಂಕಲನಗಳು ಪ್ರಕಟವಾಗಿವೆ. ಅವರ ಕಾದಂಬರಿ 'ಸ್ವಪ್ನ ಸಾರಸ್ವತ'. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅವರ ಅನುವಾದಿತ ಪುಸ್ತಕಗಳು. 'ಕನಸೆಂಬೋ ಕುದುರೆಯನೇರಿ' ಸಿನಿಮಾಕ್ಕೆ ಚಿತ್ರಕತೆ ಬರೆದಿರುವ ಅವರು ಅದರ ಅತ್ಯುತ್ತಮ ಚಿತ್ರಕತೆಗಾಗಿ ಈ ಸಿನಿಮಾದ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರೊಂದಿಗೆ ರಾಷ್ಟ್ರಪ್ರಶಸ್ತಿ ಪಡೆದುಕೊಂಡಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.